ಇತಿಹಾಸಕಾರ, ಅಲೆಕ್ಸಾಂಡ್ರೋ ಮುರಾದ್ ಮಿರನೋವ್ ಅವರ ಪ್ರಕಾರ ಸಾವಿರ.

ಬುಖಾರೆಸ್ಟ್‌ನ ಗೈಡ್‌ಗಳಲ್ಲೊಬ್ಬರಾದ ವಾಲೆಂಟಿನ್ ಮಂದಾಚೆ ನೂರು ಜನ ಸತ್ತಿದ್ದಿರಬಹುದು.

ಮತ್ತು ಕೊನೆಗೆ, ಅಲ್ಲಿ ಕೆಲಸ ಮಾಡಿದ್ದ, ಫೋಟೊಗ್ರಾಫರ್ ಮತ್ತು ಆರ್ಕಿಟೆಕ್ಟ್ ಆಂಡ್ರೆ ಪಾಂಡೇಲೆ ಅವರ ಸಂಖ್ಯೆ – ಸುಮಾರು ಕೆಲವು ಡಜನ್ ಅಷ್ಟೆ.

ಅಲ್ಲಿನ ದಾಖಲೆಗಳಲ್ಲಿ ಇದರ ಬಗ್ಗೆ ನಿಖರ ಉತ್ತರಗಳು ಸಿಗುತ್ತವೆಯೇ ಎಂದು ನೋಡಿದಾಗ ಸಿಕ್ಕಿದ್ದು ದೊಡ್ಡ ಸೊನ್ನೆ. ಕ್ರಾಂತಿಯ ಸಮಯದಲ್ಲಿ ಆ ದಾಖಲೆಗಳೆಲ್ಲ ಕಳೆದುಹೋದುವಂತೆ. ಇನ್ನೊಬ್ಬರ ಪ್ರಕಾರ, ಟ್ರಕ್‌ಗಳು ಈ ದಾಖಲೆಗಳನ್ನು ಕೊಂಡೊಯ್ದಿದ್ದನ್ನು ಅವರು ನೋಡಿದ್ದಾರಂತೆ. ಮತ್ತೊಬ್ಬರ ಪ್ರಕಾರ ಅದನ್ನು ಕೊಂಡೊಯ್ದದ್ದು ಟ್ರಕ್ಕಲ್ಲ, ಕಾಗದಗಳು ತುಂಬಿದ್ದ ಒಂದು ಮರ್ಸಿಡಿಸ್. ಇನ್ನೂ ಕೆಲವರು ಬುಖಾರೆಸ್ಟಿನ ಹೊರಗೆ ಬೆಂಕಿ ಹಾಕಿದ್ದನ್ನು ಕಂಡರಂತೆ. ಆ ದಾಖಲೆಗಳೂ ಅಲ್ಲಿ ನಾಶವಾಗಿರಬಹುದೆಂದು ಅವರ ಅನುಮಾನ. ಹೊಸ ರೊಮೇನಿಯಾದಲ್ಲಿ ಸತ್ಯ ಎನ್ನುವುದು ವಿರಳವಾಗಿ ಸಿಗುವ ವಸ್ತುವಾಗಿದ್ದು ಅದರ ಕೊಡು ಕೊಳ್ಳುವಿಕೆಯೂ ಕಳ್ಳತನದಿಂದಲೇ. ಆದರೂ ಅದಕ್ಕೇನೂ ಹೆಚ್ಚು ಬೇಡಿಕೆ ಇರುವಂತೆ ಕಾಣುವುದಿಲ್ಲ.

ಬುಖಾರೆಸ್ಟನ್ನು ರೂಪಾಂತರಗೊಳಿಸುವಲ್ಲಿ ಪ್ರಜೆಗಳ ಅರಮನೆಯದು ಒಂದು ಆಯಾಮ ಮಾತ್ರ. ನಮ್ಮ ನಾಯಕನಿಗೆ, ಈ ನಗರ ಮಧ್ಯಮವರ್ಗದವರು ವಾಸಿಸುವ ಕೆಳ ದರ್ಜೆಯ ಪಟ್ಟಣವಾಗಿ ಕಂಡಿತ್ತಂತೆ. ದೊಡ್ಡದಾಗಿ ಕಟ್ಟಿರುವ, ಹಳೆಯ ಸಾಂಪ್ರದಾಯಿಕ ಚರ್ಚ್‌ಗಳು, ದೊಡ್ಡ ದೊಡ್ಡ ಅಂಗಣಗಳಿರುವ ಕ್ರಿಶ್ಚಿಯನ್ ಮಠಗಳು ಇವೆಲ್ಲಾ ಯಾಕೆ; ಏನೂ ಕೆಲಸಕ್ಕೆ ಬಾರದ ಕಟ್ಟಡಗಳು ಎಂದು ಅವರಿಗೆ ಅನಿಸಿತಂತೆ. ಇದರ ಜೊತೆಗೆ, ಸಣ್ಣ ಸಣ್ಣ ಓಣಿಗಳು ಪ್ರಯೋಜನಕ್ಕೆ ಬಾರದ ರಸ್ತೆಗಳು. ಹಳೆಯ ವಿಲ್ಲಾಗಳನ್ನು ಕಂಡರೆ ಚೌಸೆಸ್ಕೋ ಅವರಿಗೆ ಆಗುತ್ತಿರಲಿಲ್ಲ. ಆದ್ದರಿಂದಲೇ ಈಗ ರಾಜಧಾನಿಯ ತುಂಬ ಗಗನಚುಂಬಿ ಚೌಕಾಕಾರದ ಕಟ್ಟಡಗಳು.

ಅದೂ ಅಲ್ಲದೆ, ನಾಯಕರು ಪ್ರಪಂಚ ಕಂಡವರಾಗಿದ್ದರು. ಅದರಲ್ಲೂ ಚೀನಾ ಮತ್ತು ಉತ್ತರ ಕೊರಿಯಾ. ದೊಡ್ಡ ದೊಡ್ಡ ಜಾಗಗಳು, ಕಾಂಕ್ರೀಟಿನಿಂದ ತುಂಬಿದ ನಗರಗಳು; ಇಂಥ ಅಗಾಧತೆಯಲ್ಲಿ ಜೊತೆಗೆ ಇರುವ ಸಣ್ಣ ಸಣ್ಣ ಮನುಷ್ಯರು ಅಥವಾ ಇರುವೆಗಳಾಗಿದ್ದರೂ ಇರಬಹುದು. ಏಷ್ಯಾದ ಈ ಭಾಗ ಚೌಸೆಸ್ಕೋಗೆ ತುಂಬ ಪ್ರಿಯ. ವಿಸ್ತಾರವಾದ ಜಾಗಗಳೆಲ್ಲವನ್ನೂ ಖಾಲಿ ಮಾಡಿ, ಇರುವುದೆಲ್ಲವನ್ನೂ ನೆಲಸಮ ಮಾಡಿ, ಜನರನ್ನು ಬೇರೆಡೆಗೆ ಸ್ಥಳಾಂತರಿಸಿ, ಅಲ್ಲಿ ಸುಂದರವಾದ ಕಟ್ಟಡಗಳನ್ನು ನಿರ್ಮಿಸುತ್ತಿದ್ದ ಈ ದೇಶಗಳು ಅವರ ಮೇಲೆ ಆಳವಾದ ಪರಿಣಾಮವನ್ನು ಮಾಡಿದ್ದವು. 1971ರಲ್ಲಿ ನಮ್ಮ ನಾಯಕರು ಉತ್ತರ ಕೊರಿಯಾದ ಪೇಯೀಂಗ್ಯಾಂಗ್‌ಗೆ ಭೇಟಿಯಿತ್ತ ಮೇಲೆ ಮಾಡಿದ ಒಂದು ಸಾಕ್ಷ್ಯಚಿತ್ರದಲ್ಲಿ, ಅಲ್ಲಿನ ನಾಯಕ ಕಿಮ್ ಇಲ್ ಸುಂಗ್ ಅವರ ಕಾಣದ ಕೈಗಳ ಕೈವಾಡ, ಢಾಳಾಗಿ ಕಾಣುತ್ತಿತ್ತು. ಚೌಸೆಸ್ಕೋ ಕೊರಿಯಾ ಭೇಟಿಯ ಸಮಯದಲ್ಲಿ, ಅವರನ್ನು ಆದರಿಸಲು ಬಂದ ಇರುವೆಗಳಂತೆ ಕಾಣುವ ಮಾನವ ಸಮೂಹವು ಮಾಡಿದ ತರಂಗಗಳು, ಬಣ್ಣ ಬಣ್ಣದ ಬಾವುಟಗಳಿಂದ ಅವರನ್ನು ಸ್ವಾಗತಿಸಲು ಬಂದ ಜನರು ಇವೆಲ್ಲವುಗಳಿಂದ ನಮ್ಮ ನಾಯಕರು ಉತ್ತೇಜಿತರಾದರು. ಆ ಗಳಿಗೆಯಿಂದ, ಚೌಸೆಸ್ಕೋ ಅವರಿಗೆ ತಮ್ಮದೇ ಇರುವೆಗಳ ಗುಂಪೊಂದು ಬೇಕಾಗಿತ್ತು. ಅವರದೇ ಇರುವೆಗಳು, ಅವರದೇ ಇರುವೆ ಗೂಡು ಮತ್ತು ಆ ಇರುವೆಗಳು ನರ್ತಿಸಲಿಕ್ಕೆ ಬೇಕಾದ ಕಾಂಕ್ರೀಟಿನ ಹಾಸು.